Regd. No. M 1299 SATYAVADI Fonnded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 239 | ಸೋಮವಾರ 1—7—46 | ಬಿಡಿ ಪ್ರತಿ 3 ಪೈ

ಪೌರಸಭೆ

ಸ್ಮಶಾನವನ್ನು ಬೇರೆ ಕಡೆಗೆ ಸಾಗಿಸಲು ಹಲವು ಸದಸ್ಯರು ಪ್ರತಿಭಟಿಸಿದರು ಆದುದರಿಂದ ಈ ವಿಷಯವನ್ನು ಮುಂದೂಡಿಸಲಾಯಿತು.

ಮೈಸೂರು ಜೂ॥ 30 — ರಾಜಧಾನಿ ಪೌರಸಭೆಯ ಮಾಸಗಟ್ಟಲೆ ಸಭೆಯು ನಿನ್ನೆಯ ದಿವಸ ಸಂಜೆ 4 ಗಂಟೆಗೆ ಪೌರಸಭಾಧ್ಯಕ್ಷ ಶ್ರೀ ರಾಮಚಂದ್ರರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ರಾಜಧಾನಿಯ ಹಲವು ಪೇಟೆಗಳಲ್ಲಿ ಅಂಗಡಿಗಳ ಪಹಿವಾಟು ನಡೆದಿರುವುದು ಪುರಸಭೆಗೆ ನಷ್ಟವಾಗಿರುವುದಾಗಿ ಜ॥ ಮುಹಮದ್ ಸೇಟ್‌ರವರು ತಿಳಿಸಿದರು.

ರಾಜಧಾನಿಯಲ್ಲಿ ದನಗಳನ್ನು ಸೆರೆಯಲ್ಲಿಡುವ ವ್ಯವಸ್ಥೆ ಅವ್ಯವಸ್ಥೆಯಾಗಿರುವುದಾಗಿಯೂ ಅದನ್ನು ಸರಿಪಡಿಸಬೇಕೆಂದೂ ಜ॥ ಮಹಮದ್‌ಸೇಟ್ ಅಧ್ಯಕ್ಷರ ಗಮನಕ್ಕೆ ತಂದರು.

ರಾಜಧಾನಿಯಲ್ಲಿ ಒಟ್ಟು 35 ಮನೆಗಳಿಗೆ ವಾಸದ ಅಪ್ಪಣೆಯನ್ನು ಕೊಡಲಾಗಿದೆ ಆ ಮನೆಗಳು ವಾಸಕ್ಕೆ ತೀರಾ ಅಯೋಗ್ಯವಾಗಿವೆ, ಎಂಬುದಾಗಿ ಜ॥ ಮಹಮದ್ ಸೇಟ್ ಅಧ್ಯಕ್ಷರಿಗೆ ತಿಳಿಸಿದರು

ಟಿಲಿಫೋನ್ ಬೆಲೆಯನ್ನು ಅಧಿಕಮಾಡಕೂಡದೆಂತಲೂ, ಹಾಗೆ ಮಾಡಿದರೆ ವರ್ತಕರೇ ಮುಂತಾದವರುಗಳಿಗೆ ತೊಂದರೆಯುಂಟಾಗುವುದೆಂದೂ ಶ್ರೀ ಆಗರಂ ರಂಗಯ್ಯನವರು ತಿಳಿಸಿದರು. ಶ್ರೀ ರಂಗಯ್ಯನವರು ಆ ವಿಷಯದಲ್ಲಿ ಮಂಡಿಸಿದ ನಿರ್ಣಯವನ್ನು ಜ॥ ಮಹಮದ್ ಸೇಟರು ಅನುಮೋದಿಸಿದರು.

ನಗರಾಭಿವೃದ್ಧಿ ಸಭೆಗೆ ಪ್ರತ್ಯೇಕ ಇಂಜನೀಯರು ಇರಬೇಕೆಂದೂ ಪೌರಸಭೆಗೆ ಪ್ರತ್ಯೇಕ ಇಂಜನೀಯರು ಇರಬೇಕೆಂದೂ ತೀವ್ರ ಜರ್ಜಿಯಾಗಿ ಅಧ್ಯಕ್ಷರು ಇಂಜನೀಯರನ್ನು ನೇಮಿಸುವ ಬಗ್ಗೆ ಸರ್ಕಾರಕ್ಕೆ ಹಕ್ಕಿದೆಯೆಂದು ತಿಳಿಸಿದರು

ಪೌರಸಭೆಗೆ ಸರ್ಕಾರ ತಾಲಕೊಡುವ ವಿಷಯದಲ್ಲಿ ಸರ್ಕಾರ ಬಡ್ಡಿಯನ್ನು ತೆಗೆದುಕೊಳ್ಳಕೂಡದೆಂದು ಶ್ರೀ ಜನಾರ್ಧನನ್ನಾಯ್ಡು ಸಲಹೆಯಿತ್ತರು.

ಡೈಯೋಸೀಸನ್ ಸಂಘಕ್ಕೆ ಹಣವನ್ನು ಕೊಡುವುದರಲ್ಲಿ ಸರ್ಕಾರ ಮತ್ತು ಪೌರಸಭೆ ಸಮಭಾಗಿಗಳಾಗಬೇಕೆಂದು ಸರ್ಕಾರದ ಹೇಳಿಕೆಯಲ್ಲಿ ಸರ್ಕಾರ ಹಣ್ಣು ವಿಾರಿದೆಯೆಂದೂ ಶ್ರೀ ಆಗರಂ ರಂಗಯ್ಯನವರು ತಿಳಿಸಿದರು.

ಶ್ರೀ ಜಿ ಜನಾರ್ಧನ ನಾಯ್ಡುರವರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರ ಕೊಡುತ್ತಾ ಪೌರಸಭೆಯ ಸದಸ್ಯರಾದ ಶ್ರೀ ರಂಗಸ್ವಾಮಿಯವರು ಮಹಾರಾಜ ಬಹದ್ದೂರ್ ಛತ್ರದ ದನಗಳ ಲಾಯದಲ್ಲಿ ತಮ್ಮ ದನವನ್ನು ಮೇಯಿಸಿದ್ದು ನಿಜವೆಂದೂ ಏಂಟು ದಿನಗಳವರೆಗೆ ಮೇಯಿಸಲು ಅಪ್ಪಣೆ ಕೊಡಲಾಗಿತ್ತೆಂದೂ, ಆದಕ್ಕಾಗಿ 2—14—8 ರೂ. ಕೊಟ್ಟರೆಂದೂ ತಿಳಿಸಿದರು. ಮತ್ತು ಅಧ್ಯಕ್ಷರಿಗೂ ಈ ವಿಷಯದಲ್ಲಿ ನಡೆದ ಪತ್ರವ್ಯವಹಾರ ರಹಸ್ಯವಾದುದೆಂದು ತಿಳಿಸಿದರು.

ಆರೋಗ್ಯ ಪ್ರಚಾರ ಸಮಿತಿಯ ಮೇಲೆ ಶ್ರೀ ನಾಯ್ಡುರವರು ಅನೇಕ ಪ್ರಶ್ನೆಗಳನ್ನು ಕೇಳಿದರು.

ಶ್ರೀ ಎಂ. ಆರ್. ಪಿ. ಬಸಪ್ಪನವರು ಸಭೆಯಲ್ಲಿ ಹಾಜರಿಲ್ಲದ್ದ ಪ್ರಯುಕ್ತ ಅವರ ಪ್ರಶ್ನೆಗಳೆಲ್ಲಾ ಹೋದವು.

(ಮುಂದುವರಿಯುವುದು.)

ಅಣು ಬಾಂಬು

ಜಂ ಸಾವಿರ ಜನರನ್ನು ಕೊಲ್ಲಬಲ್ಲದು ಮತ್ತು ೪ ಲಕ್ಷ ಮಂದಿಯನ್ನು ನಿರಾಶ್ರಿತರನ್ನಾಗಿ ಮಾಡಬಲ್ಲದು ಎಂದು ಬ್ರಿಟಿಷ್ ನಿಯೋಗದವರು ಹೇಳಿದ್ದಾರೆ

ಗಾಂಧೀಜಿ

ಅಪಾಯದಿಂದ ಪಾರಾದರು

ಗಾಂಧೀಜಿ ಮತ್ತು ಇತರರು ಡೆಲ್ಲಿಯಿಂದ ಬರುತ್ತಿದ್ದಾಗ ಬೊಂಬಾಯಿಂದ ಪೂನಾಕ್ಕೆ ಬರುವ ರೈಲು ಅವಘಡಕ್ಕೆ ತುತ್ತಾಗಿತ್ತು. ಗಾಂಧೀಜಿ ಮತ್ತಿತರಿಗೇನೂ ಜಖಂ ಆಗಲಿಲ್ಲ.

ಮಂತ್ರಿಗಳ ಉಪಹಾರ

ಇಂಡೋನೇಷಿಯಾ ಪ್ರಜಾಪ್ರಭುತ್ವದ ಮಹಾ ಪ್ರಧಾನಿ ಡಾ॥ ಷೆರೀರ್‌ರನ್ನು ಸಶಸ್ತ್ರ ಜನರು ಅಪಹರಿಸಿದರೆಂದು ವರದಿಯಾಗಿದೆ.

ನೇತಾಜಿ ಔತುಕೊಂಡಿರುವರೇ !

ನೇತಾಜಿ ಔತುಕೊಂಡಿರುವರೇ

ಸಿಂಗಪುರ ಜೂ॥ 24 — ಬರ್ಮಾದ ಭಾಂತೀಯ ಮುಖಂಡ ಎ॥ ಅಬ್ದುಲ್ ಘನಿ — (ಬಾಂಕಾಕ್‌ನಿಂದ ಸಂಭಾಷಕರು ಅಂತರ್ಧಾನವಾಗುವ ಮುನ್ನ ಅವರೊಡನೆ ರಹಸ್ಯ ಸಂಭಾಷಣೆ ನಡೆಸಿದವರು)ಯವರು ಆ ಕಾಲದಲ್ಲಿ ಸಂಭಾಷಕರು ಗುಟ್ಟಾದ ಸ್ಥಳದಲ್ಲಿ ಔತು ಕೊಳ್ಳಲಿಚ್ಛಿಸಿದರೆಂದೂ, ಜಪರ್ಸಾಗೆ ಹೋಗಲು ಇಚ್ಛಿಸಲಿಲ್ಲವೆಂದು ಸಂದರ್ಭ ಬಂದಾಗ ಹಿಂದಿರುಗುವರೆಂದೂ ತಿಳಿಸಿದರು.

ನ್ಯಾಯವಿಧಾಯಕ ಸಭೆ

ವಿ. ಬಾ.] ಬೆಂಗಳೂರು, ಜೂ॥ 29

ಸರ್ಕಾರಕ್ಕೆ ಪರಾಜಯ

[ವಿದ್ಯಾ ಖಾತೆ]

12 ಘಂಟೆಗೆ ಸರಿಯಾಗಿ ರಾ॥ ಪ್ರ॥ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಶಾಸನ ಸಭೆ ಸೇರಿತು.

ಶ್ರೀ ಧ ಪ್ರ ವೆಂಕಾಜಿರಾವ್— ಮೈಸೂರು ವಿಶ್ವವಿದ್ಯಾಲಯದ ಕೌನಿಸಿಲ್ ಮತ್ತು ಸೆನೆಟ್ ಸಭೆಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕೆಂದರು.

ಸೂಚಕರು ಬಾಲಕೃಷ್ಣಯ್ಯ. ಗುರುವಾರೆಡ್ಡಿ ಟಿ. ಮರಿಯಪ್ಪ, ಮಹದೇವಯ್ಯ ಬೇಲೂರು ಶ್ರೀನಿವಾಸಯ್ಯಂಗಾರು ಮೋತಾ ನಿರ್ಣಯವನ್ನು ಪುಷ್ಟಿಕರಿಸಿ ಮಾತಾಡಿದರು. ಮುಸಿರ್ ಉಲ್ ಮುಲ್ಕ್ ಇಮಾಂರವರು ಹಿಂದಿದ್ದ ಕಾಲದ ಅನುಭವದಿಂದ ಸರ್ಕಾರದ ದೃಷ್ಟಿಯನ್ನು ಪುಷ್ಟಿಕರಿಸಿ ಮಾತಾಡಿದರು.

ಸರ್ಕಾರದಪರ ಶ್ರೀ ಹಿರಣಯ್ಯನವರು ಉತ್ತರವಿತ್ತರು ಅನಂತರ ವೋಲಿಂಗ್‌ನಲ್ಲಿ ಮೋತ್ತಾ ನಿರ್ಣಯದ ಪರವಾಗಿ 33 ಮತ್ತು ವಿರೋಧವಾಗಿ 30 ಸದಸ್ಯರು ಮತ ನೀತ್ತರು.

ಈ ಮೋತಾ ನಿರ್ಣಯವು ಗೆದ್ದಿತು ಸರ್ಕಾರವು ಸೋತಿತು.

ಈ ವಾರದ ಭವಿಷ್ಯ

(ಓಂ ಜೋತಿಷ್ಕರಿಂದ)

ಮೇಷ — ಆರೋಗ್ಯ ಲಾಭವುಂಟು. ವ್ಯವಹಾರದಲ್ಲಿ ಅಶಾಂತಿ ತೋರಬಹುದು ಮಾನಸಿಕ ಸ್ಥಿತಿ ಉತ್ತಮವಿರದು, ಆದರೆ ಧನಲಾಭ ವಿರುತ್ತದೆ.

ವೃಷಭ — ಯಾವ ಬಗೆಯಲ್ಲಿಯೂ ಉತ್ತಮವಿರುವುದಿಲ್ಲವಾದುದ್ದರಿಂದ ' ನಿನೇ ಗತಿ ' ಎಂದು ದೇವರ ಶರಣುಹೋಗಿರಿ.

ಮಿಥುನ — ಶಾರೀರಿಕ ಮಾನಸಿಕ ಆರ್ಥಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಾಗಿರುತ್ತವೆ.

ಕಟಕ — ಖರ್ಚು ಹೆಚ್ಚು ಆರೋಗ್ಯ ಚನ್ನಾಗಿರದು. ಮನೋಚಾಂಚಲ್ಯತೆ ಹೆಚ್ಚುತ್ತದೆ

ಸಿಂಹ — ಶಾರೀರಿಕ ವ್ಯವಹಾರಿಕ ಆರ್ಥಿಕ ಮಾನಸ್ಥಿತಿಗಳಲ್ಲಿ ಯಾವವೂ ಉತ್ತಮವಾಗಿರುವದಿಲ್ಲ.

ಕನ್ಯಾ — ಲಾಭವುಂಟು ಲಾಭಕ್ಕೆ ಸರಿಯಾದ ಖರ್ಚುವುಂಟು. ಆರೋಗ್ಯ ಚೆನ್ನಾಗಿರುವದಿಲ್ಲ. ವ್ಯವಹಾರದ ಕಷ್ಟಗಳು ತೋರುವವು.

ತುಲ — ಕೈಗೊಂಡ ಕಾರ್ಯಗಳು ಫಲಪ್ರದಗಳಾಗುತ್ತವೆ. ಆರೋಗ್ಯವೂ ಚೆನ್ನಾಗಿರುತ್ತದೆ. ಮನಸ್ಸು ಹರ್ಷದಾಯಕವಾಗಿರುತ್ತದೆ.

ವೃಶ್ಚಿಕ— ಆಕಸ್ಮಿಕ ಧನ ಲಾಭ ಯೋಗವಿದೆ ವಿದ್ವಾಂಸರ ಸಹವಾಸ ದೊರೆಯಬಹುದು.

ಧನಸ್ಸು— ಶಾರೀರಿಕ, ಸಾಂಪತ್ತಿಕ ವ್ಯವಹಾರಿಕ ವಿಷಯಗಳು ಉತ್ತಮವಾಗಿರುತ್ತವೆ.

ಮಕರ— ಖರ್ಚು ಹೆಚ್ಚು. ಆರೋಗ್ಯ ಚೆನ್ನಾಗಿರುವುದಿಲ್ಲ, ವ್ಯವಹಾರಗಳಲ್ಲಿ ತೊಂದರೆ.

ಕುಂಭ— ಮನೋಸ್ಥಿತಿಯು ಉತ್ತಮವಾಗಿಲ್ಲದಿದ್ದರೂ ಶರೀರ ಸ್ಥಿತಿಯು ಚೆನ್ನಾಗಿರುತ್ತದೆ. ವ್ಯವಹಾರದಲ್ಲಿ ತೊಡಕುಗಳಿಗೆ ಅವಕಾಶವಿದೆ.

ಮೀನ— ಚಿಂತಿಸಿದ ಕಾರ್ಯಗಳು ನೆರವೇರುವವು, ಆರೋಗ್ಯ ಉತ್ತಮ, ವ್ಯವಹಾರಗಳಲ್ಲಿ ಲಾಭ, ಯತ.

ಮತ್ತೆ ಯುದ್ಧ

ಪುನಃ ೨ ವರ್ಷಗಳಲ್ಲಿಯೇ ಪ್ರಪಂಚ ಯುದ್ಧ ಸಂಭವಿಸುವುದೆಂದು ಈಜಿಪ್ಟ್ ಪತ್ರಿಕೆ ಭವಿಷ್ಯವನ್ನು ನುಡಿದಿರುವುದು.

ಡಬ್ಲಿನ್ ಜೂ॥ 26— ಶಾಸನ ರುಜುವಾಗುವವರೆಗೆ ಐರ್ಲಂಡ್ ಸಂಸ್ಥೆಗೆ ಸೇರುವುದಿಲ್ಲವೆಂದು ಮಂತ್ರಿ ಡಿವೆಲಂರವರು.

ವೃತ್ತಾಂತ ಸಂಗ್ರಹ

ಲಂಡನ್ ಜೂನ್ 29— ಸಂಯುಕ್ತ ಅಮೇರಿಕಾವು ಯುದ್ಧದಲ್ಲಿ 4 ಲಕ್ಷ ಮಂದಿ ಸ್ತ್ರೀಪುರುಷರನ್ನು ಕಳೆದು ಕೊಂಡಿರುವುದಾಗಿ ಅಮೇರಿಕಾ ಯುದ್ಧ ಶಾಖೆ ಪ್ರಕಟಿಸಿದೆ.

ಹೋಲಿವುಡ್— ಬೈಬಲ್ಲನ್ನು ರಂಗಿನ ಚಿತ್ರವಟವಾಗಿ ತಯಾರಿಸಲು ಯತ್ನ ನಡೆದಿದೆ

ತಿನ್ನವೆಲ್ಲಿ ಜೂನ್ 29 — ಪೋಸ್ಟ್ ಮೇನ್ ಸಂತಾನಪ್ಪನೆಂಬಾತನು 3 ಮನಿಯಾರ್ಡರುಗಳನ್ನು [ರೂ. 197] ಪಾರ್ಟಿಗಳ ಹೆಬ್ಬೆಟ್ಟು ಗುರ್ತನ್ನು ಫೋರ್ಜರಿ ಮಾಡಿ ಅಪಹರಿಸಿದ್ದಕ್ಕಾಗಿ 5 ವರ್ಷಗಳ ಕಠಿಣ ಸಜಾ ಮತ್ತು ರೂ. 100 ಜುಲ್ಮಾನೆ ವಿಧಿಸಲಾಗಿದೆ.

ಬಾಗ್ದಾಡ್ ಜೂನ್ 28— ಪೋಲೀಸರಿಗೂ ಮತ್ತು 3000 ಮಂದಿ ಕಾರ್ಮಿಕರೂ ಮತ್ತು ವಿದ್ಯಾರ್ಥಿಗಳಿಗೂ ಆದ ಹೊಡೆದಾಟದಲ್ಲಿ ಒಬ್ಬನು ಹತನಾದನೆಂದೂ, ಅನೇಕರು ಗಾಯಗೊಂಡಿರುವರೆಂದೂ ಪ್ರಕಟವಾಗಿದೆ. ಪ್ಯಾಲಿಸ್ಟೈನ್ ಸಮಸ್ಯೆಯನ್ನು ವಿಶ್ವಸಂಸ್ಥೆಗೆ ಒಪ್ಪಿಸಬೇಕೆಂದೂ, ಬ್ರಿಟಿಷ್ ಸೇನೆಯು ಇರಾಕಿನಿಂದ ವಾಪಸ್ಸಾಗಬೇಕೆಂದೂ ಪ್ರಜಾ ಕೇಳಿಕೆಯೇ ಇದಕ್ಕೆ ಕಾರಣ.

ಡಾರ್ ಎಸ್ ಸಲಾಂ ಜೂನ್ 26 — ಬೇಗಂ ಆಗಾಖಾನರು 15 ಸಾವಿರ ಪೌಂಡು (ಎರಡು ಲಕ್ಷ ರೂಪಾಯಿ) ಬೆಲೆ ಬಾಳುವ ವಜ್ರಗಳಿಂದ ಕೂಡಿರುವ ಸೀರೆಯನ್ನು ಆಗಸ್ಟ್ 10 ರಲ್ಲಿ ಇಲ್ಲಿ ನಡೆಯುವ ಆಗಾಖಾನ್ ವಜ್ರೋತ್ಸವ ಸಂದರ್ಭದಲ್ಲಿ ಧರಿಸುವರು. ಸೀರೆಯು ಭಾರತದಲ್ಲಿ ತಯಾರಿಸಲ್ಪಡುತ್ತಿದೆಯೆಂದೂ, ಸಮಾರಂಭ ಮುಕ್ತಾಯವಾದ ನಂತರ ಸರ್ವವೂ ಬ್ರಿಟಿಷ್, ಭಾರತ ಮತ್ತು ಟಿಂಗನೀಕದ ಆಹಾರಗಳಿಗಾಗಿ ಹಂಚಲಾಗುವುದು.

|| ವಂದೇ ಮಾತರಂ ||

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

No. R 4—898 / 45/46 ತಾ || 27–6–1946

ನೋಟಿಫಿಕೇಷನ್

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಜುಲೈ ಒಂದನೇ ತಾರೀಖು ಲಾಗಾಯ್ತು **ಎಲೆಕ್ಟ್ರಿಕ್ ದೀಪವಿಲ್ಲದವರ ಮನೆಯ ರೇಷನ್ ಕಾರ್ಡು ಹೋಲ್ಡರುಗಳಿಗೆ ಮಾತ್ರ** ಸೀಮೆ ಎಣ್ಣೆಯನ್ನು ಈ ಕೆಳಗೆ ಕಂಡ ಪ್ರಮಾಣದಲ್ಲಿ ಕೊಡಲಾಗುವುದು—

1. ಹಾಲಿ 1-1/3 ಸೀಸೆ ಎಣ್ಣೆ ಪಡೆಯುತ್ತಿದ್ದವರಿಗೆ 2 ಸೀಸೆಯನ್ನು ಕೊಡಲಾಗುವುದು.

2. ಹಾಲಿ 2 ಸೀಸೆ ಪಡೆಯುತ್ತಿದ್ದವರಿಗೆ 2½ ಸೀಸೆಯನ್ನು ಕೊಡಲಾಗುವುದು.

ರೇಷನ್ ಕಾರ್ಡು ಹೋಲ್ಡರುಗಳು ತಮ್ಮ ರೇಷನ್ ಕಾರ್ಡುಗಳನ್ನು ಸಂಬಂಧಪಟ್ಟ ಅಸಿಸ್ಟೆಂಟು ರೇಷನಿಂಗ್ ಆಫೀಸಿನಲ್ಲಿ ಹಾಜರ್ಮಾಡಿದರೆ ಮೇಲ್ಕಂಡ ಬದಲಾವಣೆಯನ್ನು ಮಾಡಲಾಗುವುದು.

(ಸಹಿ) **ಅಬ್ದುಲ್ ರಜಾಕ್**

27–6–46 ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಎ. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

Get Medical Diplomas

At home :— Ayurvedic Homeopathic, Unani, etc Prospectus Free.

Old Indian Medical College
Kotgarh, Simla

At Ranjit

2 ನೇ ವಾರ

SHADI

ಮಾಧುರಿ — ಮೋತಿಲಾಲ್

ಕುಷ್ಕಿದ್ — ಈಶ್ವರಲಾಲ್

ಪಾತ್ರವಹಿಸಿರುವ

ಶಾದಿ

(ಹಿಂದಿ)

Edited, Printed and published by M. S. Krishna Rao, at the Satvavadi Press, Chamaraja Agrahar, Mysore

At Opera

From 26–6–46

COBRA WOMAN

— In Technicolor —

Featuring—

MARIA MONTEZ
JON HALL
MYSORE SABU

Daily 3 Shows

Next Change—"LAVAN

ಶೂಲಕ್ಕೇರಿಸುವವರ ಕೆಲಸ ಹೆಚ್ಚಿದೆ

ಜರ್ಮನಿಯಲ್ಲಿ ಬ್ರಿಟಿಷ್ ಭಾಗದಲ್ಲಿ ಮರಣದಂಡನೆಗೆ ಬಹುವಂದಿ ಯುದ್ಧ ತಕ್ಸೀರುದಾರರು ಗುರಿಯಾಗುತ್ತಿದ್ದಾರೆ. ಶೂಲಕ್ಕೇರಿಸುವವನಿಗೆ ಇನ್ನು 2 ವರ್ಷ ಪಟ್ಟಾಗಿ ಹೊಡೆದು ಸಾಯಿಸುವ ಏರ್ಪಾಡು ಮಾಡಲಾಗುವುದೆಂದೂ ಹೇಳಲಾಗಿದೆ.

ಹಿಂದಿರುಗುವರು

ನವದೆಹಲಿ ಜೂ॥ 25 — ಸಚಿವ ನಿಯೋಗ ಎರಡು ಮೂರು ದಿನಗಳಲ್ಲಿ ಇಂಗ್ಲೆಂಡಿಗೆ ಹಿಂದಿರುಗುವರು. ಸಮಸ್ಯ ವಿಷಯಗಳನ್ನೂ ಮಂತ್ರಿ ಮಂಡಲಕ್ಕೆ ವರದಿ ಮಾಡುವರು.

ನೆಹರು ಬಗ್ಗೆ ಕಳವಳ

ನವದೆಹಲಿ ಜೂ॥ 25 — ಪಂ॥ ನೆಹರುವಿಗೆ ಕಾಶ್ಮೀರದಲ್ಲಿ ಗಾಯಪಡಿಸಲಾಯಿತೆಂದು ಪತ್ರಿಕಾ ವರದಿ ಬಗ್ಗೆ ಚಿಯಾಂಗ್ ದಂಪತಿಗಳು ಕಳವಳ ವ್ಯಕ್ತ ಇಲ್ಲಿಗೆ ತಂತಿ ಮಾಡಿ ನೆಹರುರವರು ಸುಖವಾಗಿರುವುದಾಗಿ ಅವರಿಂದಲೇ ತಿಳಿದು ಕೊಂಡರು.

ಐರೋಪ್ಯ ಸತ್ಯಾಗ್ರಹಿಗಳು

ಡರ್ಬಾನ್ ಜೂ॥ 24 — 32 ಮಂದಿ ಭಾರತ ಸತ್ಯಾಗ್ರಹಿಗಳು ನ್ಯಾಯಾಧೀಶರ ಎದುರಿಗೆ ನಿಲ್ಲಿಸಲ್ಪಟ್ಟರು. ಪುರಸಭೆಯು ಅಜ್ಞೋಲ್ಲಂಘನೆ ಮಾಡಿದರೆಂಬುದೇ ಅಪರಾಧ ಭಾರತೀಯ ಸತ್ಯಾಗ್ರಹಿಗಳೊಡನೆ ಐರೋಪ್ಯರಿಬ್ಬರು ಪುರಸಭೆಯ ನಿವೇಶನವನ್ನು ಪ್ರವೇಶಿಸಿ ಅಜ್ಞೋಲ್ಲಂಘನೆ ಮಾಡಿ ಸತ್ಯಾಗ್ರಹವನ್ನು ಭಾರತೀಯ ಪಥವಾಗಿ ಹೂಡಿದರು. ವಿಚಾರಣೆ ಮುಂದಿನ ಮಾಹೆ ತಾ॥ 1 ಕ್ಕೆ ಇಡಲಾಗಿದೆ. ಐರೋಪ್ಯ ಸತ್ಯಾಗ್ರಹಿ ಮೈಕಲ್ ಸ್ಕಾಟ್ ದಕ್ಷಿಣ ಆಫ್ರಿಕಾ ನೀತಿಯನ್ನು ಖಂಡಿಸಿದ್ದಾರೆ.

ಹೊಸ ಅರಬ್ಬಿಗ್ರಾಮ

ಉತ್ತರ ಪ್ಯಾಲಿಸ್ಟೈನಿನಲ್ಲಿ 36 ಸಾವಿರ ಪೌಂಡಿಗೆ ಅರಬ್ ಹೈಕವಿಟ್ ಕೊಂಡಿರುವ ಗ್ರಾಮಕ್ಕೆ ಮುಖ್ತಿಗೌರವಾರ್ಥವಾಗಿ ನಾಕ್ ಅಪೂಕ್ ಎಂದು ಕರೆಯಲಾಗಿದೆ. ಯಹೂದ್ಯರಿಗಿಂತ ಹೆಚ್ಚು ಜರ್ಡನ್ ಖಾಸ್ತಿನಲ್ಲಿ ಅರಬ್ಬಿಯ.

ತಾತ್ಕಾಲಿಕ ಸರ್ಕಾರ ಮುಗಿಯಿತು

ನವದೆಹಲಿ ಜೂ॥ 24 — ತಾತ್ಕಾಲಿಕ ಸರ್ಕಾರ ವ್ಯವಸ್ಥೆಯನ್ನು ಕಾಂಗ್ರೆಸ್ ತಿರಸ್ಕರಿಸಿ ವೈಸ್ರಾಯಿಗೆ ಪತ್ರ ಬರೆಯಿತು.

ಹಿಂದೂ ನಾಗರಿಕತೆ

ಸಿಂಧ್‌ನಲ್ಲಿ ಈಚೆಗೆ ಕಂಡು ಹಿಡಿದ 5000 ವರ್ಷಗಳ ಹಿಂದಿನ ಪುರಾತನ ನಗರ ಶಿಥಿಲಗಳಲ್ಲಿ ಎಷ್ಟೋ ಚೆನ್ನಾಗಿರುವ ಕೂಜ್ಜೆಯು ಹರಿದು ಹೋಗಲು ಬಚ್ಚಲುಗಳ ಏರ್ಪಾಡಿದೆ. ಅನೇಕ ಪಂಡೇಶೀಯರು ಕೂಡ ಈ ಏರ್ಪಾಡುಗಳನ್ನು ನೋಡಿ ಎಷ್ಟೋ ಆಶ್ಚರ್ಯ ಪಡುತ್ತಿರುವರು. ನಾಗರಿಕತೆಯು ಚನ್ನಾಗಿ ಬಲಿತಿರುವ ಈ ಕಾಲದಲ್ಲಿ ಕೂಡ ಎಷ್ಟೋ ನಗರಗಳಲ್ಲಿ ಅಂತಹ ಉತ್ತಮವಾದ ಏರ್ಪಾಡು ಇಲ್ಲವೆಂದಲ್ಲಿ ಅತಿಶಯೋಕ್ತಿಯಾಗಲಾರದು ಚಾರಿತ್ರಕ ಯುಗಕ್ಕೆ ಹಿಂದಿನಿಂದಲೂ ಹಿಂದೂ ಶಿಲ್ಪಕಳೆ ಹಿಂದೂ ನಾಗರಿಕತೆಗಳು ಎಷ್ಟು ಮಹೋನ್ನತ ಸ್ಥಿತಿಯಲ್ಲಿದ್ದವೋ ತಿಳಿಸಲು ಇದ್ದಕ್ಕಿಂತ ಉತ್ತಮವಾದ ಉದಾಹರಣೆಯು ಬೇಕಾಗಿರುವುದಿಲ್ಲ.

ಕಚ್ಚಾ ಫಿಲ್ಮಿನ ಅಭಾವ

ಕಚ್ಚಾ ಫಿಲ್ಮಿನ ಅಭಾವದಿಂದಾಗಿ ಮುಂಬಾಯಿಯ ಹಲವು ಫಿಲ್ಮ್ ಸ್ಟುಡಿಯೋಗಳಲ್ಲಿ ಕೆಲಸ ಸಂಪೂರ್ಣ ನಿಂತಿರುವುದು. ಬೊಂಬೇ ಟೂಕಿಸ್, ಫಿಲ್ಮಿಸ್ತಾನ್, ಫೇಮಸ್ (ಪ್ರಭಾತ್) ಪಿಕ್ಚರ್ಸ್ ಇವೇ ಮೊದಲಾದ ಪ್ರಮುಖ ಚಲಚ್ಚಿತ್ರ ಸಂಸ್ಥೆಗಳೂ ಚಲಚ್ಚಿತ್ರ ತಯಾರಿ ಕೆಲಸವನ್ನು ನಿಲ್ಲಿಸಬೇಕಾಗಿ ಬಂದಿದೆ. ಸ್ಟುಡಿಯೊಗಳ ಅವಶ್ಯಕತೆಯನ್ನು ಪೂರೈಸುವಷ್ಟು ಕಚ್ಚಾ ಫಿಲ್ಮ್ ಸಂಗ್ರಹತನ್ಮಲ್ಲಿ ಇಲ್ಲವೆಂದು ಕೋಡಕ್ ಕಂಪೆನಿಯವರು ಸಹಾಯ ಶೂನ್ಯತೆ ಪ್ರಕಟಿಸಿದ್ದಾರೆ. ಕಳ್ಳಸಂತೆಯಲ್ಲೂ ಫಿಲ್ಮ್ ದೊರೆಯುವುದಿಲ್ಲ. (ಕಳ್ಳಸಂತೆಯಲ್ಲಿ ರೀಲಿಗೆ ರೂ. 1400 ವರೆಗೆ ಕಚ್ಚಾ ಫಿಲ್ಮ್ ಮಾರಾಟವಾಗುತ್ತಿತ್ತು.) ಮದ್ರಾಸಿನ ಸ್ಟುಡಿಯೋಗಳೂ ಕಚ್ಚಾ ಫಿಲ್ಮ್ ಅಭಾವದಿಂದ ಕಷ್ಟಕ್ಕೀಡಾಗಿದೆ. (ಪ್ರ)

.....

ಮದರಾಸು ಸರ್ಕಾರದ ಸ್ಥಳೀಯ ಆಡಳಿತಗಳ ಮಂತ್ರಿ ಡೇನಿಯಲ್ ಥಾಮಸರು ಕಂಚೀ ಮುನಿಸಿಪಾಲಿಟಿಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಮುನಿಸಿಪಾಲಿಟಿಗಳು ಬಸ್ ಸರ್ವಿಸ್ ಸಿನಿಮಾ ಮುಂತಾದ ಲಾಭದಾಯಕ ಯೋಜನೆಗಳಲ್ಲಿ ಕೈಹಾಕಿದರೆ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಬಹುದು ಎಂದಿರುವರು.

ಂ ಂ

ಬಂಡಲಖಂಡದ ಝಾಡಮಾಲಿಗಳು ತಮ್ಮದೇ ಒಂದು ವಾರಪತ್ರಿಕೆ ಹೊರಡಿಸುವರಂತೆ.

ಜಿಲ್ಲಾಧಿಕಾರಿಗಳೇ ದರೋಡೆಗಾರರು !

ಅಲಹಬಾದ್ ಜೂ॥ 24 — ಬಾಂದಾಜಿಲ್ಲೆಯ ಸರ್ದುವಾದ ಆಡಳಿತಹದಗೆಟ್ಟಿದೆ. ಆಹಾರ ಶೇಖರಣೆ ಮಾಡುತ್ತೇವೆಂದು ದರ್ಮಪಲ್‌ದುಬೆ ಎಂಬುವರ ಮನೆಯನ್ನು ಪೋಲಿಸರೊಡನೆ ಜಿಲ್ಲಾಧಿಕಾರಿಗಳು ಲೂಟಿ ಮಾಡಿ ಧಾನ್ಯಾಭರಣಗಳೊಡನೆ ಓಡಿದರು ! ಪ್ರಜೆಗಳ ಮೇಲೆ ಅತ್ಯಾಚಾರ ನಡೆಯುತ್ತಿದೆ ಹೆದರಿದ ಪ್ರಜೆಗಳು ಕಾಡು ಸೇರುತ್ತಿದ್ದಾರೆ. ವರ್ತಮಾನವು ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ವರದಿ ಮಾಡಲ್ಪಟ್ಟಿದೆ.

ಹಿಂದುಗಳು ಹೆಂಗಸರೇ ?

" ಮುಸ್ಲಿಂ ಲೀಗಿನಲ್ಲಿ ಹೀನ ಪಕ್ಷದ ಸಭ್ಯನಾದರೂ ಹಿಂದೂ ಕಾಂಗ್ರೆಸಿಗೆ ಸೇರಿದ ಶ್ರೀ ಗಾಂಧಿಯವರಿಗಿಂತ ಹಿರಿಯವನು. ಮುಸಲ್ಮಾನರು ಸಿಂಹಗಳು ; ಅವರ ಆಯುಧವು ಬಾಕು. ಹಿಂದುಗಳಾದರೋ ಹೆಂಗಸರು ; ಅವರ ಆಯುಧ ರಾಟೆ " ಎಂಬುದಾಗಿ ಸಿಂಧ್ ಸರ್ಕಾರದ ವಿದ್ಯಾ ಶಾಖೆಯ ಮಂತ್ರಿ ಪೀರ್ ಅಲ್ಲಾಹಿ ಬಕ್ಷ್‌ರವರು ಒಂದು ಸಭೆಯಲ್ಲಿ ಹೇಳಿದರು ಎಂದು ತಾ॥ 7 ರ 'ಮರಾಟ' ಪತ್ರಿಕೆ ಪ್ರಕಟಿಸಿದೆ.

ಮೃತನು ಜೀವಂತನಾದ

ಅಲಹಾಬಾದ್ ಜೂ॥ 25 — ಮೃತ ಸಂಸ್ಕಾರಕ್ಕಾಗಿ ಅಯೋಧ್ಯೆಗೆ ಚಟ್ಟದಲ್ಲಿ ಕೊಂಡು ಹೋಗುತ್ತಿದ್ದ ಪುರುಷ ಶವವೊಂದು ದಾರಿ ಮಧ್ಯೆ ಚಟ್ಟದಿಂದ ಕೂಗಿ ಕೂಂಡು ಎದ್ದಿತು !

ಲೀಗ್ ಒಪ್ಪಿಗೆ

ನವದೆಹಲಿ ಜೂ॥ 25 — ತಾತ್ಕಾಲಿಕ ಸರ್ಕಾರ ಯೋಜನೆಯನ್ನು ಮುಂಸ್ಲಿಂ ಲೀಗ್ ಪುರಸ್ಕರಿಸಿತು. ಲೀಗ್ ತಾತ್ಕಾಲಿಕ ಸರ್ಕಾರ ಸ್ಥಾಪನೆಯಾಗುವುದಾಗಿ ನಗರದಲ್ಲೆಲ್ಲಾ ಊಹಾಪೋಹ ಈ ಮಧ್ಯೆ ಸರ್ ರಾಧಕೃಷ್ಣನ್ ಮುಸ್ಲಿಂರನ್ನು ಸಮಾಧಾನ ಪಡಿಸುತ್ತಾ ಹೋಗಬಾರದು ಎಂದಿದ್ದಾರೆ. ಅನಧಿಕೃತವಾರ್ತೆ ಪ್ರಕಾರ ತಾತ್ಕಾಲಿಕ ಸರ್ಕಾರ ಯೋಜನೆಯೇ ಮಾಯವಾಗಿದೆ.

ನೂತನ ಸ್ಥಾನಪತಿಗಳು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿದ್ಯಾಧಿಕಾರಿಗಳಾದ ಜ॥ ಸುಲ್ತಾನ್ ಮೋಹಿಯುದ್ದೀನ್‌ರವರನ್ನು ಶ್ರೀಮನ್ಮಹಾರಾಜರು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಪತಿಗಳನ್ನಾಗಿ ನೇಮಿಸಿರುವುದಾಗಿ ತಿಳಿದುಬಂದಿದೆ. ಅಧಿಕಾರ ಸೂತ್ರವನ್ನು ಜುಲೈ ತಾ॥ 1 ರಲ್ಲಿ ವಹಿಸಿಕೊಳ್ಳುವುದಾಗಿ ಗೊತ್ತಾಗಿದೆ.

ಒಟಾವಿಯಾ — ಉತ್ತರಜಾವಾದ ರೈಲ್ವೆ ಲೈನಿನಲ್ಲಿ ಬ್ರಿಟಿಷ್ ಸೈನಿಕರಿಗೂ ಇಂಡೋನೇಷಿಯನ್ನರಿಗೂ ಹೊಡೆದಾಟ ಪ್ರಾರಂಭವಾಗಿದೆ.

ಸುನಾತ್ರಾ ಜನರು ಸೇನೆಯನ್ನು ಕಾಪಾಡೆಂತ್ತಿರುವುದು

ಜವಹರಲಾಲರ

ಅವಗಾಹನಕ್ಕೆ

1) ನೈಜಾಂ ಸಂಸ್ಥಾನದ ಓರ್ವ ಮುಸಲ್ಮಾನ ಡಿ|| ಮುನ್ಸೀಪಲ್ ಹಿಂದು ಮುಸಲ್ಮಾನ ವಿವಾಹದಲ್ಲಿ ತೀರ್ಪನ್ನು ಕೊಡುತ್ತ ' ಗ್ರಾಮಗಳಲ್ಲಿ ಎಲ್ಲಾ ಕಡೆ ಮುಸೂತಿಗಳಿರುವದರಿಂದ ಹಿಂದೂಗಳು ನಾಜಾಭಜಂತ್ರಿಯಿಂದ ಮೆರವಣಿಗೆ ತೆಗೆದು ಕೊಂಡು ಹೋಗಬಾರದು. ಊರ ಹೊರಗೆ ಗೋಲಿಗಳು ಮುಸಲ್ಮಾನ ಸರ್ಕಾವೆಂದು ಹಿಂದೂಗಳು ಏನನ್ನೂ ಮಾಡಲಾಗದು. ಅಂದ ಮೇಲೆ ಹಿಂ ದೂಗಳು ಅಲ್ಲಿಗೆ ಹೋಗಬೇಕೆಂದು ' ಪೇಳಿ ಹಿಂದೂಗಳ ಮೇಲೆ ಬಂದಿದ್ದ ಕೇ ಸನ್ನು ಹೊಡೆದು ಹಾಕಿದರು.

2) ನೈಜಾಂ ಸಂಸ್ಥಾನದಲ್ಲಿ ಹಿಂ ದೂಗಳನ್ನು ಮುಸಲ್ಮಾನ ಮತಕ್ಕೆ ಸೇರಿಸಲು ಪ್ರೋತ್ಸಾಹಿಸಿದ ಮುಸಲ್ಮಾ ನ ಅಧಿಕಾರಿಗಳಿಗೆ ಬೋನಸ್ಸು ಪ್ರೊ ಮೋಷನ್ನು ಮುಂತಾದುವನ್ನು ಸರಕಾ ರವು ಕೊಡುವದಂತೆ.

3) ಒಂದು ಗ್ರಾಮದಲ್ಲಿ ಕೆಲ ಮು ಸಲ್ಮಾನರು ಓರ್ವ ಗುಜರಾಥಿ ಹುಡುಗಿ ಯನ್ನು ಎತ್ತಿಕೊಂಡು ಹೋಗರಲಾಗಿ ಕೆಲ ಹಿಂದೂಗಳು ಸಾಹಸದಿಂದ ಆಕೆ ಯನ್ನು ಬಿಡಿಸಿ ಆಕೆಯ ತಂದೆ ತಾಯಿಗ ಳ ಸ್ವಾಧೀನ ಮಾಡಲಾಗಿ ಹಾಗೆ ಬಿಡಿ ಸಿದವು ಮನೆಗಳನ್ನು ಮುಸಲ್ಮಾನ ರುಂಡರು ಹಲ್ಲೆ ನಾಡಿದರೂ ಹಲ್ಲೀ ಬಗ್ಗೆ ಯಾವ ಚರ್ಚೆ ತೆಗೆದುಕೊಳ್ಳಲಿಲ್ಲ

4) ನಡಿಯಾಡ ಜಿಲ್ಲೆಯಲ್ಲಿಯು ಏಲಿ ಬಗ್ಗೆ ಆದ ದುರಂತರದ ಬಗ್ಗೆ ಸರಕಾರಿ ಪ್ರಕಟನೆಗಳ ವಿನಹ ಇತರ ಸ್ವಾತಂತ್ರ್ಯ ದ ದಾರಿಯಿಂದ ಯಾವ ಸುದ್ದಿಗಳು ಬ ರುವಂತಿಲ್ಲ ಅಲ್ಲಿಯ ಅಂಧ್ರ ಮಹಾ ಸಭೆಯ ಅಧ್ಯಕ್ಷರು ಸೆರೆ ಹಿಡಿಯಲ್ಪಟ್ಟಿ ರುವರು ಎಷ್ಟೋ ಮಾನವಂತರು ತ ಲೆ ತಪ್ಪಿಸಿಕೊಂಡಿರುವರು. ಅವರ ಹೆಂ ಡರ ಮಕ್ಕಳ ಗತಿಯನ್ನು ವರ್ಣಿಸಲು ಸಾಧ್ಯವಿಲ್ಲ.

5] ಇದುವರೆಗೂ ಯಾವ ಕಾಂಗ್ರೆಸ್ ಸಮುಖಂಡನ ಭಾಷಣವೂ ಆ ಸಂ ಸ್ಥಾನದಲ್ಲಿ ಆಗಿರುವದಿಲ್ಲ. ಲೇಟ ಭು ಲಾಭಾಯಿ ಯವರು ಅಲ್ಲಿ ಭಾಷಣ ಮಾ ಡಲು ಪ್ರತಿಬಂಧಕವಾಯಿತು.

ಪಂಡಿತ ಜವಹರಲಾಲರು ತನು ಕಾ ಲದ ಸ್ವವಾಸವನ್ನು ತೀರಿಸಿಕೊಂಡು ಜಾಂ ಸಂಸ್ಥಾನಕ್ಕೂ ಭೆಟಿಕೊಟ್ಟು ಇ ಪ್ರಜರ ಸ್ಥಿತಿಗತಿಯನ್ನು ಅರಿತು ಜರಿಗೆ ಎಷ್ಟೋ ಕ್ಷೇಮವಾ

(ನ. ಸಂ)

ಶ್ವೇತವರ್ಣದವರ ಸುಳ್ಳು ನಾಗರಿಕತೆ

ಅಮೆರಿಕಾ ಸಂಯುಕ್ತ ರಾಷ್ಟ್ರ ಸ ರ್ಕಾರದವರು ಪ್ರಪಂಚದಲ್ಲಿ ಕ್ಷಾಮ ಪೀಡಿತವಾಗಿರುವ ಪ್ರದೇಶಗಳಿಗೆ ತಮ್ಮ ದೇಶದಲ್ಲಿಯು ಹೆಚ್ಚು ಧಾನ್ಯವನ್ನು ಕ ಳುಹಿಸಲು ಏರ್ಪಾಡು ಮಾಡುತ್ತಿದ್ದಾ ರೆ. ಆದರೆ ರುಚಿಯನ್ನು ಕಂಡು ಕೊಂ ಡಿರುವ ಅಮೆರಿಕ ರೈತರು ಧಾನ್ಯವನ್ನು ಕೊಡಲು ಅಂಗೀಕರಿಸದೆ ಹಟ ಹಿಡಿದಿ ರುವರು. ಇದಕ್ಕೆ 3 ಕಾರಣಗಳು

[1] ಧಾನ್ಯವನ್ನು ಧಾನ್ಯರೂಪದಲ್ಲಿ ಮಾರುವದಕ್ಕಿಂತ ಹಿಂದಿ ನೊದಲಾದ ಪ್ರಾಣಿಗಳಿಗೆ ತಿನ್ನಿಸಿ ಅವನ್ನು ಕೊಂದು ಅವುಗಳ ಮಾಂಸವನ್ನು ರಫ್ತು ಮಾಡುವ ದರಿಂದ ಬಹಳ ಲಾಭವನ್ನು ಪಡೆಯುಬ ಹುದು. [2] ಧಾನ್ಯವನ್ನೇ ರಫ್ತು ಮಾ ಡಬೇಕಾಗಿ ಬಂದರೂ ಅದನ್ನು ಈಗ ಲೇ ಕಳುಹಿಸುವದಕ್ಕಿಂತ ಕ್ಷಾಮವು ತೀವ್ರಸ್ಥಿತಿಗೆ ಬಂದಾಗ ರಫ್ತು ಮಾಡಿದಲ್ಲಿ ಹೆಚ್ಚು ಬೆಲೆ ದೊರೆಯುವದು [3] ತಮ್ಮಲ್ಲಿಯ ಧಾನ್ಯವನ್ನು ಮುಂಚಿತವಾ ಗಿಯೇ ಕೊಡದೆ ಶೇಜರಿಸಲ್ಪಟ್ಟಿದ್ದು ಯಾವ ದೇಶವು ತಮಗೆ ರಾಜಕೀಯ ವಾಗಿ ಹೆಚ್ಚು ಉಪಯೋಗವಾಗಿರುತ್ತ ದೆಯೋ ಆ ದೇಶಕ್ಕೇ ರವಾನೆ ಮಾಡಿ ಅವರ ಮಾತುಬರಿಯನ್ನು ಸಂಪಾದಿಸಿ ಕೊಳ್ಳುವದು. ಕ್ಷಾಮದಿಂದ ಪ್ರಾಣ ಬಿಡಲು ಬಿಡಲು ಸಿದ್ಧವಾಗಿರುವ ದೇಶ ಗಳನ್ನು ಈ ಬಗೆಯು ಕಾರಣಗಳಿಗಾಗಿ ಸತ್ತಾಯಿಸುವದು ಅಮೆರಿಕದಂಥಾ ಶ್ವೇ ತ ಜಾತಿಯು ನಾಗರೀಕತೆಗೇ ತಕ್ಕದ್ದೆ ನ್ನಬಹುದಲ್ಲವೇ !

ಹಿಂದೂಗಳ

ಒಂದು ಉತ್ತಮ ಸಹಜಗುಣ

ಮೊಗಲಾಯಿ ಕಾಲದಲ್ಲಿ ತಲೆಗಂ ದಾಯಿವನ್ನು ವಿಧಿಸಿ ಧರ್ಮಗ್ರಂಥ ಪಠ ಣೆಗೂ, ಧರ್ಮಕಾರ್ಯಚರಣೆಗೂ ಕೆಲವ ರು ಸ್ವಭೂಗಳು ಹಿಂದೂಗಳಿಗೆ ಭೂಮಿ ಯನ್ನೇಲಿ ಇಂಬಾಗದಷ್ಟು ಕಿರುಕುಳ ಗಳನ್ನು ಕೊಟ್ಟಿದ್ದರೂ ಅವರು ತಮ್ಮ ಮತವನ್ನು ತ್ಯಜಿಸಿ ಮಹಮದೀಯ ಮತವನ್ನು ಅವಲಂಬಿಸಲಿಲ್ಲ. ಕೆಲವರು ಧಾರ್ಮಿಕ ಹಿಂದೂಗಳು ಹೊರಗೆ ಸೋ ಡಲು ಮಹಮದೀಯರಂತೆ ಗಡ್ಡವನ್ನು ಬೆಳಿಸಿ, ಅವರಂತೆ ಉಡುಪನ್ನು ಧರಿಸು ತ್ತಾ, ಗೃಹದಲ್ಲಿ ರಾಮಾಯಣ ಪಾರಾ ಯಣ ಮೊದಲಾದ ಹಿಂದೂ ಧರ್ಮ ನಿಯಮಗಳನ್ನು ಆಚರಿಸುತ್ತಿದ್ದರುತೆ ಗೋವಾದಲ್ಲಿ ಪೋರ್ಚುಗೀಸರು ಅವರು ಮೊದಲು ಆ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡಾಗ ಅವರಿಗೆ ಕೊಟ್ಟ ಕಷ್ಟಗಳು ಅಷ್ಟಿಷ್ಟಲ್ಲ ಏನಾದರೂ ಮಾಡಿ ಕ್ರೈಸ್ತ ಮತಕ್ಕೆ ಅಲ್ಲಿಯ ಜನ

ಈಜಿಪ್ಟಿನಲ್ಲಿ ಸಾರ್ವತ್ರಿಕ ಮುಷ್ಕರ

ಕೈರೋ ಜೂ 22— ನಿರುದ್ಯೋಗ ಸಮಸ್ಯೆ ಬಗ್ಗೆ ಸರಕಾರದ ನೀತಿಯನ್ನು ಖಂಡಿಸಲು ಈಜಿಪ್ಟ್ ಲೇಬರ್ ಯೂನಿ ಯನ್ನಿನವರು ಮಂಗಳವಾರ ಸಾರ್ವತ್ರಿಕ ಮುಷ್ಕರವನ್ನು ಆಚರಿಸಲು ಆಜ್ಞೆ ಮಾ ಡಿದ್ದಾರೆ. ಮುಷ್ಕರ ಬಿದರಿಕೆಯ ಸರ ಬಂಧದ ವಿಚಾರವನ್ನು ಪ್ರಕಟಿಸಕೂಡ ದೆಂದು ಪ್ರತಿಬಂಧಿಸಲ್ಪಟ್ಟಿದ್ದರೂ, ಅಲ್ ಬಲಾಗ್ ಪತ್ರಿಕೆಯು ಪ್ರಕಟಿಸಿದ್ದಕ್ಕಾಗಿ ಅದಕ್ಕೆ ಸರಕಾರದ ಮುಟ್ಟುಕೋಲು ಬಿದ್ದಿದೆ.

ಅಕ್ಕೀ ಪುರಾಣ

ಸಿಂಗಪುರ ಜೂ 22— ಬರ್ಮಾದ ಮುಂದಿನ ಸುಗ್ಗಿಯಲ್ಲಿ ದೊರೆಯಬಹು ದಾದ ಅಕ್ಕಿಯು ಅಲ್ಲಿಗೆ ಸಾಕಾಗಲಾರ ದಂತೆ ! ಇನ್ನು ನಮಗೇನು ಕೊಟ್ಟಾರು !

ಮದರಾಸು ಸರಕಾರವು ಹರಿಜನೋ ದ್ಧಾರಕ್ಕಾಗಿ ೧ ಕೋಟಿ ರೂ. ವ್ಯಯಮಾಡಲಿದೆ

ಳೆಲ್ಲರನ್ನೂ ಸೇರಿಸಿಕೊಳ್ಳಲು ವಿಶ್ವ ಪ್ರ ಶ್ನದರೂಯಿನ್ನು ಆ ದೇಶವ ಮಾಡಿ ಬಿಟ್ಟುಹೋಗಲು ಯತ್ನಿಸಿದರಾಗಲಿ ಪರಕೀಯರ ಪಾತ್ರವನ್ನು ಅವಲಂಬಸ ಲಿಲ್ಲ. ಈ ವಿಷಯವನ್ನರಿತೂ ಈಗಿನ ಹಿಂದೂಗಳು, ಹಿಂದೂಮತ ಸಿಯಮ ಗಳಲ್ಲಿ ಬದಲಾವಣೆಗಳನ್ನು ಮಾಡಲು ಏಕೆ ಯತ್ನಿಸುತ್ತಿರುವರೋ ಕಂಡು ಬರುವುದಿಲ್ಲ. ಯಾರು ಏನು ಮಾಡಿ ದರೂ ಎಂದಿಗೂ ಹಿಂದೂಗಳ ಹಿಂದೂತ್ವ ವು ಕೊನೆಗಾಣಲಾರದು ಖಂಡಿತ.

ಅಂಚೆ ಮುಷ್ಕರ

ಪೂನಾ ಜೂ 24 — ಮುಂದಿನ ಮಾಹೆ ತಾ|| 11 ರಿಂದ ಸರ್ಕಾರದ ಅಂ ಚೆ ಶಾಖೆಯ ಸಣ್ಣ ನೌಕರರು ಮುಷ್ಕರ ಹಿಡಿಯುವುದಾಗಿ ತಿಳಿಯಬಂದಿದೆ. ಸೌ ಕರ್ಯ ಹೆಚ್ಚದಿದ್ದರೆ ಖಂಡಿತ ಮುಷ್ಕರ ವಂತೆ.

ಸಂತೋಷ ವಿಷಯ !

ನವದೆಹಲಿ ಜೂ 23 — ' ಆಫ್ರಿ ಕಾ ಭಾರತ ಸತ್ಯಾಗ್ರಹಿಗಳ ಬಂಧನ ವಿ ಷಯ ಸಂತೋಷಕರವಾದ ಸುದ್ದಿ. ಆ ತ್ಮಗೌರವವನ್ನು ನಾಶಿಸುವಂತಹ ಕಾನೂ ನನ್ನು ಮುರಿದು ಶಿಕ್ಷಾರ್ಹನಾಗಲು ನ ತ್ಯಾಗ್ರಹಿ ಸಿದ್ಧನು ' ಎಂಬುದಾಗಿ ಗಾಂ ಧೀಜಿ ಪ್ರಾರ್ಥನಾ ಸಭೆಯಲ್ಲಿ ನುಡಿ ದರು.

ತಾತ್ಕಾಲಿಕ ಸರ್ಕಾರ

ತಾತ್ಕಾಲಿಕ ಸರ್ಕಾರದಲ್ಲಿ ತಮ್ಮ ಮೂರು ಅಂಶಗಳನ್ನು ಒಪ್ಪುವುದಿಲ್ಲವಾ ದರೆ, ತಾತ್ಕಾಲಿಕ ಸರಕಾರವನ್ನು ನಿರಾ ಕರಿಸುವುದಾಗಿ ಕಾಂಗ್ರೆಸ್ಸು ತಿಳಿಸಿದೆ.

ಮಧುರೆಯಲ್ಲಿ ಗೋಲೀಬಾರು

ಮಧುರೆ ಜೂ 23— ಕಾಶ್ಮೀರದ ಲ್ಲಿ ಪಂ || ನೆಹರೂರವರನ್ನು ದಸ್ತಗಿರಿ ಮಾಡಿದ ಬಗ್ಗೆ ಇಲ್ಲಿಗೆ ಆದ ಗಲಭೆ ಸಂ ಬಂಧದಲ್ಲಿ ಪೋಲೀಸರು ಗುಂಡುಹಾರಿ ಸಿದರು. 7 ಮಂದಿ ಸತ್ತರು, 30 ಮಂ ದಿಗೆ ಗಾಯವಾಗಿದೆ.

ವಿಶ್ವರಂಸ್ಥೆಗೆ ಭಾರತದ ದೂರು

ನ್ಯೂಯಾರ್ಕ್ ಜೂ 23— ದ. ಆಫ್ರಿಕಾದಲ್ಲಿ ಭಾರತೀಯರಿಗೆ ದೊರೆಯು ತ್ತಿರುವ ಹಿಂಸೆ ಮತ್ತು ಅಗೌರವಗಳನ್ನು ಕುರಿತು ಭಾರತ ಸರಕಾರವು ವಿಶ್ವಸಂಸ್ಥೆ ಗೆ ಅರಿಹಿದೆ.